# ಗೋ ವಿಶ್ವ

Cow Universe

गौ विश्व

ಸರ್ವಧಾರಿ ಸಂವತ್ಸರ | ಪುಷ್ಯ | ಡಿಸೆಂಬರ್ ೨೦೦೮ | ಸಂಪುಟ–೨ | ಸಂಚಿಕೆ–೧೨


ಗುರುವಾಣಿ

## ಗೋಮಂಡಲ, ಭೂಮಂಡಲದ ಶ್ರೇಯಸ್ಸಿಗೆ ಸಂತ ಸಮಾಜ ಒಗ್ಗೂಡಬೇಕು



ಗೋವು ಸಮಸ್ತ ಲೋಕದ ಜೀವನಾಡಿಯಾಗಿ ನಮಗೆ ಮಾತ್ರವಲ್ಲ ಸಕಲ ಚರಾಚರಗಳಿಗೂ ಮಾತೆಯಾಗಿ ನಿಂತಿದ್ದಾಳೆ. ಈ ಭೂಮಂಡಲದಲ್ಲಿರುವ ಸಮಸ್ತ ಜೀವಕೋಟಿಗೂ ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ಮಾತೃ ಪ್ರೇಮವನ್ನು ಗೋಮಾತೆ ಉಣಿಸುತ್ತಿದ್ದಾಳೆ. ಋಷಿಮುನಿಗಳಂತೂ ಗೋಮಾತೆಯನ್ನು ಅತ್ಯಂತ ಉನ್ನತ ಸ್ಥಾನದಲ್ಲಿಟ್ಟೇ, ತಮ್ಮೆಲ್ಲರ ಗುರುವಾಗಿಯೇ ಭಾವಿಸುತ್ತಿದ್ದರು.

ಅದೇ ಗೋವು ಸ್ವರ್ಗದಲ್ಲಿ **ಕಾಮಧೇನು**ವಾಗಿ ದೇವದೇವತೆಗಳಿಗೆ ಅಮೃತವನ್ನೀಯುತ್ತಿದ್ದಾಳೆ. ಆ ನಾಲ್ಕು ಕಾಲಿನ ಕಾಮಧೇನುವನ್ನು ಭೂಲೋಕಕ್ಕೆ ಇಳಿಸಿ, ಇಲ್ಲಿನ ಸಮಸ್ತ ಜೀವಿಗಳಿಗೆ ಅಮೃತವನ್ನುಣಿಸಿ, ಸಂತೃಪ್ತ, ಸುಖೀ ವಿಶ್ವವನ್ನು ಸಾಕಾರಗೊಳಿಸಬೇಕಿದೆ. ಇದಕ್ಕಾಗಿ ಇಂದು ನಮ್ಮ ಸಂತ ಸಮಾಜ ಎರಡು ಕಾಲಿನ ಕಾಮಧೇನುವಾಗಿ ಶೋಭಿಸಬೇಕಿದೆ. ಸಮಸ್ತ ಸಂತ ಸಮಾಜ ಆ ಮೂಕ ಗೋವನ್ನು ತಮ್ಮಲ್ಲಿ ಆವಾಹಿಸಿಕೊಂಡು ಸಮಾಜಕ್ಕೆ ತೃಪ್ತಿಯನ್ನು ಕ್ಷೀರಾಮೃತದ ಮೂಲಕ ನೀಡಬೇಕಿದೆ. ತಾಯಿಯ ಮಮತೆಯನ್ನು ನೀಡಬೇಕಿದೆ. ಗುರುವಾಗಿ ಹೆಗ್ಗುರಿಯೆಡೆಗೆ ಕೈಪಿಡಿದು ನಡೆಸಬೇಕಿದೆ. ತನ್ಮೂಲಕ ಸಮಾಜವನ್ನು ಸುಸ್ಥಿರವಾಗಿ ಕಟ್ಟುವಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸಬೇಕಾದ ಅನಿವಾರ್ಯತೆ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ.

ಹಾಗೆ ಸಂತ ಮಂಡಲ ನಾಲ್ಕು ಕಾಲಿನ ಗೋಮಾತೆಯ ಮೇಲಾಗುತ್ತಿರುವ ದೌರ್ಜನ್ಯವನ್ನು ತಡೆಗಟ್ಟಿ, ಅದನ್ನು ಸುಖೀ ಕಾಮಧೇನುವಾಗಿ, ಸಮೃದ್ಧ ಕಾಮಧೇನುವಾಗಿ, ವಿಶ್ವಮಾತೆ ಕಾಮಧೇನುವಾಗಿ ಮತ್ತೊಮ್ಮೆ ರೂಪಿಸಬೇಕಿದೆ.

ಈ ನಿಟ್ಟಿನಲ್ಲಿ ಗುರುವರ್ಯರುಗಳ ದೀರ್ಘಾಲೋಚಿತ ಕರೆಗೆ ಓಗೊಟ್ಟು ಸಮಸ್ತರೂ ಏಳಿ, ಎದ್ದೇಳಿ.

ಗೋ ಸಂರಕ್ಷಣೆ, ಸಂವರ್ಧನೆಯ ಕೈಂಕರ್ಯಕ್ಕೆ ಕೈಜೋಡಿಸ ಬನ್ನಿ. ಸತ್ಕಾರ್ಯದಲ್ಲಿ ತೊಡಗುವ ಸ್ಫೂರ್ತಿಯು ಸಿಗಲೆಂದು ಆಶಿಸುತ್ತೇವೆ.

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ

### ಹೂರಣ


ಗುರುವಾಣಿ

ಪ್ರಶ್ನೋತ್ತರ

ಮಾಸದ ಗೋವು: ಡಾಂಗಿ

ಗೋವಿಗೆ ವಿಷವಾದ ಪ್ಲಾಸ್ಟಿಕ್

ಸುದ್ದಿ ಸಮಾಚಾರ

ಪಂಚಗವ್ಯ – ರೈತರಿಗೆ ವರದಾನ



ಪ್ರಕಾಶನ: IT4COW ಸಂಘಟನೆ

groups.yahoo.com/group/IT4COW

ಅಂತರಜಾಲ ತಾಣ: vishwagou.org

ಸಂಪರ್ಕ: govishva@gmail.com




# ಪ್ರಶ್ನೋತ್ತರ

ಪ್ರ: ಆಧುನಿಕ ತಂತ್ರಜ್ಞಾನದ ಈ ಕಾಲದಲ್ಲಿ ಎತ್ತಿನ ಗಾಡಿಗಳ ಬಳಕೆ ಎಷ್ಟು ಸರಿ ?

ಉ: ಆಧುನಿಕ ತಂತ್ರಜ್ಞಾನ ಎಂಬುದಕ್ಕಿಂತ ಸಮುಚಿತ ತಂತ್ರಜ್ಞಾನ ಎಂಬುದು ಹೆಚ್ಚು ಮುಖ್ಯ. ಬಂಡವಾಳ ಹಾಗೂ ಪೆಟ್ರೋಲಿಯಂ ಎರಡೂ ಕೊರತೆಯಲ್ಲಿರುವ ಭಾರತಕ್ಕೆ ಎತ್ತಿನ ಗಾಡಿಗಳು ಸಮುಚಿತ ತಂತ್ರಜ್ಞಾನ. ನಮ್ಮ ದೇಶದಲ್ಲಿ ಸುಮಾರು ೨ ಕೋಟಿ ಎತ್ತಿನ ಗಾಡಿಗಳಿವೆ. ಇದರಲ್ಲಿ ಶೇ ೯೦ರಷ್ಟು ಹಳೇ ಕಾಲದ ಹೆಚ್ಚು ಭಾರದ ಮರದ ಗಾಡಿಗಳು. ಆಧುನಿಕ ತಂತ್ರಜ್ಞಾನ ಬಳಸಿ ಕಡಿಮೆ ತೂಕದ, ಹೆಚ್ಚು ಗಟ್ಟಿ ಮುಟ್ಟಾದ, ಸುಲಭವಾಗಿ ತಿರುಗಬಲ್ಲ, ಹಾಗೂ ದುಬಾರಿಯಲ್ಲದ ಎತ್ತಿನ ಗಾಡಿಗಳನ್ನು ತಯಾರಿಸುವುದು ಸಾದ್ಯವಿಲ್ಲವೇ? ಆದರೆ ಎಷ್ಟು ವಿಜ್ಞಾನ ಸಂಸ್ಥೆಗಳಲ್ಲಿ ಹಾಗೂ ಕಾಲೇಜುಗಳಲ್ಲಿ ಈ ಬಗೆಯ ಜನಪರ ಸಂಶೋಧನೆ ನಡೆದಿದೆ?

ಪ್ರ: ಗೋ ಸಂರಕ್ಷಣೆಯಿಂದ ಕೃಷಿಗೆ ಏನು ಪ್ರಯೋಜನವಿದೆ?

ಉ: ಭಾರತೀಯ ಕೃಷಿ, ಸಹಸ್ರಾರು ವರ್ಷಗಳಿಂದಲೂ ಗೋ ಆಧಾರಿತವೇ ಆಗಿತ್ತು. ಅದು ಸುಸ್ಥಿರ ಹಾಗೂ ಸಮೃದ್ಧ ಕೃಷಿಯಾಗಿತ್ತು. ಆಗ ರೈತರು (ಈಗಿನಂತೆ) ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲ. ಭಾರತದಲ್ಲಿ ಗೋವುಗಳು ಸಮೃದ್ಧವಾಗಿದ್ದಾಗಲೆಲ್ಲಾ ಕೃಷಿಯೂ ಸಮೃದ್ಧವಾಗಿತ್ತು. ಗೋವುಗಳು ಅವನತಿ ಹೊಂದಿದಂತೆಲ್ಲಾ ಕೃಷಿಯೂ ಅವನತಿ ಹೊಂದುತ್ತಿರುವುದನ್ನು ಕಾಣಬಹುದು. ಹೀಗೆ ಭಾರತದಲ್ಲಿ ಗೋವುಗಳು ಮತ್ತು ಕೃಷಿಯ ನಡುವೆ ಅವಿನಾವಭಾವ ಸಂಬಂಧವಿದೆ. ಅವೆರಡೂ ಜತೆಯಾಗಿ ಏಳುತ್ತವೆ, ಜತೆಯಾಗಿ ಬೀಳುತ್ತವೆ. ಹಾಗಾಗಿ ಹೀನಾಯ ಸ್ಥಿತಿಯಲ್ಲಿರುವ ಇಂದಿನ ಭಾರತೀಯ ಕೃಷಿಯನ್ನು ಸುಧಾರಿಸಲು ಅದನ್ನು ಪುನಃ ಗೋ ಆಧಾರಿತವನ್ನಾಗಿ ಮಾಡಬೇಕಾಗಿದೆ. ಅದಕ್ಕಾಗಿ ಭಾರತೀಯ ಗೋ ವಂಶದ ಸಂರಕ್ಷಣೆ ಇಂದಿನ ಅಗತ್ಯ.

– **ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

# ಪುತ್ತೂರು ಸಮೀಪದ ಮಾಣಿ ಮಠದ ಗೋಶಾಲೆಯ ಚಿತ್ರಗಳು









ಮಾಸದ ಗೋವು

# ಡಾಂಗಿ

**ಪಕ್ಕ ಕೆಲಸಗಾರ ತಳಿ ಡಾಂಗಿ. ಮುಂಬಯಿ ಸಮೀಪದ ಗುಡ್ಡಗಾಡು ಪ್ರದೇಶ ಇವುಗಳ ತವರೂರು. ಜಡಿ ಮಳೆಯಲ್ಲೂ ಗದ್ದೆಯಲ್ಲಿ ಇವು ದುಡಿಯಬಲ್ಲವು.**

ಡಾಂಗಿಗಳಿಗೆ ಆ ಹೆಸರು ಬಂದಿದ್ದು ಅವುಗಳ ತವರೂರು ಬಾಂಬೆ ಹತ್ತಿರದ ಡಾಂಗ್ಸ್ ಎಂಬ ಗುಡ್ಡಗಾಡು ಪ್ರದೇಶದಿಂದ. ಇಲ್ಲಿಯ ಅತೀ ಮಳೆಯ ಕಾರಣ, ಕೃಷಿ ಇಲ್ಲಿ ಆರ್ಥಿಕವಾಗಿ ಅಂತ ಅರ್ಥಿಕವಾಗಿ ಅನುಕೂಲಕರ ಎನೂ ಅಲ್ಲ. ಆದರೆ ಡಾಂಗಿಗಳ ಕಷ್ಟಸಹಿಷ್ಣು ದೇಹದಾರ್ಢ್ಯತೆ, ಅತೀ ಮಳೆಗೂ ಜಗ್ಗದೇ ದುಡಿಯಬಲ್ಲ ಸಾಮರ್ಥ್ಯವೇ ಇಲ್ಲಿನ ಬಡರೈತರು ಗಂಜಿ ಕಾಣಲು ನೆರವಾಗಿದೆ ಎಂದರೆ ಖಂಡಿತಾ ಅತಿಶಯೋಕ್ತಿ ಆಗಲಾರದು.



ಡಾಂಗಿಗಳು ಸಾಮಾನ್ಯವಾಗಿ ನಸುಗೆಂಪು, ಕಪ್ಪು ಇಲ್ಲವೇ ಕೃಷ್ಣ ವರ್ಣದವು. ಬೆನ್ನ ಮೇಲೆ ಇಡೀ ಆಕಾರಕ್ಕೆ ಒಂದು ಗಂಭೀರತೆ ತರಬಲ್ಲಂತ ಡುಬ್ಬ. ಮಧ್ಯಮ ಗಾತ್ರದ ಕುಳ್ಳ ತಳಿ. ಚಿಕ್ಕ ತಲೆ, ಉಬ್ಬಿದ ಹಣೆ, ಕೊಂಬುಗಳು ಹೀಗೆ ಅಂತ ಏನಿಲ್ಲದಿದ್ದರೂ ಸಾಮಾನ್ಯವಾಗಿ ಸಣ್ಣ ದಪ್ಪನೆಯದು. ಕಿವಿಗಳಂತೂ ತೀರ ಚಿಕ್ಕದು. ಇದರ ಹೊಳೆವ ದಪ್ಪ ಚರ್ಮ ಒಂದು ರೀತಿಯ ಜಿಡ್ಡನ್ನು ಸೃಜಿಸಿ ಮಳೆಯ ಹೊಡೆತದಿಂದ ರಕ್ಷಿಸುವುದು ಡಾಂಗಿಯ ವೈಶಿಷ್ಟ್ಯ. ಆಶ್ಚರ್ಯವೆಂದರೆ ಡಾಂಗಿಗಳ ಇಡೀ ಶರೀರವೇ ಜಡಿಮಳೆಯಲ್ಲಿ ದುಡಿಯಲೋಸುಗ ಹೇಳಿ ಮಾಡಿಸಿಟ್ಟಂತಿದೆ.

ಇವುಗಳು ದಿನಕ್ಕೆ ಸರಾಸರಿ ೨೫ರಿಂದ ೩೦ ಕಿ.ಮಿ. ಕ್ರಮಿಸಬಲ್ಲವು. ಡಾಂಗಿಗಳನ್ನು ಕಟ್ಟಿ ಸಾಕುವ ಕ್ರಮ ಕಮ್ಮಿ. ಅಹಾರದ ಅವಶ್ಯಕತೆಯೂ ತುಲನಾತ್ಮಕವಾಗಿ ಕಡಿಮೆಯೆ.

ಡಾಂಗಿಗಳು ಹೈನುಗಾರಿಕ ತಳಿಗಳಲ್ಲ. ಪಕ್ಕ ಕೆಲಸಗಾರ ತಳಿ. ಜಡಿಮಳೆಯಲ್ಲಿ ಬತ್ತದ ಗದ್ದೆಯಲ್ಲಿ ಇವುಗಳ ಉಳುಮೆ, ಗುಡ್ಡಗಾಡುಗಳ ಏರು ಹಾದಿ ಇವುಗಳ ಶ್ರಮರಹಿತ ಓಡಾಟ ಇವುಗಳನ್ನು ನೋಡಿದರೆ ಮಾತ್ರವೆ ಡಾಂಗಿಗಳ ನಿಜವಾದ ಬೆಲೆ, ಪ್ರಾಮುಖ್ಯ ತಿಳಿಯುತ್ತದೆ ಎನ್ನುತ್ತಾರೆ ರೈತರು.

**– ಮಧುಕೇಶ ದೊಡ್ಡೇರಿ**



ಡಾಂಗಿ, ಮಹಾರಾಷ್ಟ್ರ

**ಮೂಲ : ನಾಸಿಕ್, ಅಹಮದ್‌ನಗರ – ಮಹರಾಷ್ಟ್ರ**
**ವಿಭಾಗ : ಕೆಲಸಗಾರ ತಳಿ**
**ಸಾಧಾರಣದಿಂದ ದೊಡ್ಡ ಗಾತ್ರದ ತಳಿ.**
**ಅತ್ಯುತ್ತಮ ಕೆಲಸಗಾರ ತಳಿ.**
**ತುಂಬಾ ಮಳೆ ಬೀಳುವ ಪ್ರದೇಶದಲ್ಲಿ ಬೆಳೆದ ತಳಿ.**
**ಬಣ್ಣ : ಬಿಳಿ ಬಣ್ಣದಲ್ಲಿ ಕಪ್ಪು / ಕೆಂಪು ಚುಕ್ಕೆಗಳಿರುವ ಆಕರ್ಷಕ ತಳಿ**
**ಮೂತಿ : ದೊಡ್ಡದಾಗಿರುತ್ತದೆ.**
**ಕೊಂಬು : ಸಣ್ಣ ಹಾಗೂ ದಪ್ಪವಾಗಿರುತ್ತವೆ.**
**ಕಿವಿ : ಸಣ್ಣದು.**
**ಗೊರಸು : ಗಟ್ಟಿ ಕಪ್ಪು ಬಣ್ಣದಲ್ಲಿರುತ್ತದೆ.**
**ಚರ್ಮ : ಜಿಡ್ಡಿನಂಥಹ ದ್ರವ ಸೂಸುತ್ತದೆ.**
**– ಮಳೆಯಿಂದ ರಕ್ಷಿಸುತ್ತದೆ.**

# ಗೋವಿಗೆ ವಿಷವಾದ ಪ್ಲಾಸ್ಟಿಕ್

ಇಂದು ನಮ್ಮ ನಿತ್ಯ ಜೀವನದ ಒಂದು ಅವಿಭಾಜ್ಯ ಅಂಗವಾಗಿಬಿಟ್ಟಿರುವ ಪ್ಲಾಸ್ಟಿಕ್, ಹಂತ ಹಂತವಾಗಿ ನಮ್ಮನ್ನು ಆವರಿಸಿ ವಿನಾಶದಂಚಿಗೆ ಕೊಂಡೊಯ್ಯುತ್ತಿರುವುದು ಎಲ್ಲರಿಗೂ ತಿಳಿದ ವಿಚಾರ. ಪರಿಸರದಲ್ಲಿನ ಪ್ರತಿಯೊಂದು ಜೀವಿಗೂ ಇದು ಹಾನಿ ಮಾಡದಿಲ್ಲ. ಹಾಗಿರುವಾಗ ನಮ್ಮ ಗೋಮಾತೆಯನ್ನೂ ಇದು ಬಿಟ್ಟಿಲ್ಲವೆಂದು ಬೇರೆ ಹೇಳಬೇಕಿಲ್ಲ ತಾನೆ?

ಸುಮಾರು ಎಂಟುವರ್ಷಗಳ ಹಿಂದೆ ಲಕ್ನೋದಲ್ಲಿ ಗೋವುಗಳೆಲ್ಲ ಒಂದು ರೀತಿಯ ವಿಚಿತ್ರ ಖಾಯಿಲೆಯಿಂದ ಬಳಲಿ ಸಾವಿಗೀಡಾಗುವ ಸಮಸ್ಯೆ ತಲೆದೋರಿತು. ಕಾರಣವೇನೆಂದು ಯಾರಿಗೂ ಹೊಳೆಯಲಿಲ್ಲ. ಗೋವುಗಳನ್ನು ಎಂದಿನಂತೆ ಪಟ್ಟಣದ ಬೀದಿಗಳಲ್ಲಿ ಬಿಡುತ್ತಿದ್ದರು. ಅವುಗಳೂ ಏನೋ ಸಿಕ್ಕಿದ್ದನ್ನು ತಿನ್ನುತ್ತಿದ್ದವು. ಮೇಲ್ನೋಟಕ್ಕೆ ಆರೋಗ್ಯವಾಗಿಯೇ ಕಾಣುತ್ತಿದ್ದವು. ದಿನಗಳೆದಂತೆ ಕ್ಷೀಣವಾಗುತ್ತಾ ಹೋಗಿ ಸಾವಿನತ್ತ ಮುಖಮಾಡುತ್ತಿದ್ದವು. ಕಾರಣ ಪತ್ತೆಹಚ್ಚಲು ಈ ರೀತಿ ಬಳಲುತ್ತಿದ್ದ ಕೆಲವು ಗೋವುಗಳನ್ನು ಶಸ್ತ್ರಚಿಕಿತ್ಸೆಯ ಮೂಲಕ ಪರೀಕ್ಷಿಸಲಾಯಿತು. ಆಗ ತಿಳಿಯಿತು ಸತ್ಯಾಂಶ. ಆ ಗೋವುಗಳ ಹೊಟ್ಟೆಯಲ್ಲಿ ಒಂದಷ್ಟು ಪ್ಲಾಸ್ಟಿಕ್ ಚೀಲಗಳು ಸಿಕ್ಕಿದವು! ಸುಮಾರು ೫೦–೬೦ಕ್ಕೂ ಹೆಚ್ಚು ಪ್ಲಾಸ್ಟಿಕ್ ಚೀಲಗಳು!



ಹಣ್ಣು, ತರಕಾರಿ ಇತ್ಯಾದಿಗಳನ್ನು ಕೊಂಡೊಯ್ಯಲು ಬಳಸುವ ತೆಳುವಾದ ಪ್ಲಾಸ್ಟಿಕ್ ಚೀಲಗಳನ್ನು ಹಾಗೆಯೇ ಕಸದ ತೊಟ್ಟಿಗೋ ಅಥವಾ ಬೀದಿಬದಿಯಲ್ಲೋ ಎಸೆಯುವವರೇ ಹೆಚ್ಚು. ಅವು ಜೀವಕ್ಕೇ ಕುತ್ತು ತರಬಹುದಾದ ಮಾನವ ನಿರ್ಮಿತ ವಿಷವೆಂದು ಮುಗ್ಧ ಗೋವುಗಳಿಗೇನು ಗೊತ್ತು? ಹೊಟ್ಟೆಹಸಿವನ್ನು ತಣಿಸಿಕೊಳ್ಳಲು ತರಕಾರಿ, ತಿಂಡಿಗಳ ಪರಿಮಳ ಬೀರುವ ಅವುಗಳಿಗೇ ಬಾಯಿಹಾಕುತ್ತವೆ. ಈ ರೀತಿ ತಿನ್ನಲ್ಪಟ್ಟ ಪ್ಲಾಸ್ಟಿಕ್ ಜೀರ್ಣವಾಗುವುದೂ ಇಲ್ಲ, ಜೀರ್ಣಾಂಗವ್ಯೂಹದ ಮೂಲಕ ಚಲಿಸಿ ಹೊರಬರುವುದೂ ಇಲ್ಲ. ತಿಂದ ಪ್ಲಾಸ್ಟಿಕ್ ಎಲ್ಲ ಹೊಟ್ಟೆಯಲ್ಲಿ ಶಾಶ್ವತವಾಗಿ ಕುಳಿತುಬಿಡುತ್ತದೆ. ತತ್ ಪರಿಣಾಮ ಗೋವಿಗೆ ಸ್ವಲ್ಪ ಆಹಾರ ತಿಂದ ತಕ್ಷಣ ಹೊಟ್ಟೆ ತುಂಬಿದಂತೆ ಭಾಸವಾಗುತ್ತದೆ. ದಿನಗಳೆದಂತೆ ಇನ್ನೂ ಹೆಚ್ಚು ಹೆಚ್ಚು ಪ್ಲಾಸ್ಟಿಕ್ ಸೇವನೆಯಿಂದ ಬೇರೆ ಆಹಾರವೇನನ್ನೂ ತಿನ್ನಲಾಗದ ಸ್ಥಿತಿ ಬಂದುಬಿಡುತ್ತದೆ. ಹೊಟ್ಟೆ ದೊಡ್ಡದಾಗಿ, ಗೋವು ಶಾಶ್ವತವಾಗಿ ಮಲಗಿಬಿಡುತ್ತದೆ!

ನಮ್ಮಲ್ಲಿ ಗೋವು ಪೂಜನೀಯ ಸ್ಥಾನದಲ್ಲಿದೆ. ಹಾಗಾಗಿ ಯಾವುದರಿಂದ ಆ ಜೀವಕ್ಕೆ ಹಾನಿಯಾಗುತ್ತದೆಯೋ ಅದು ನಿಷೇಧಗೊಳ್ಳಬೇಕು ಎಂಬ ಜನಜಾಗೃತಿ ಅಂದು ಮೂಡಿತ್ತು. ಪ್ಲಾಸ್ಟಿಕ್ ನಿಷೇಧದ ಬಗ್ಗೆ ಪಾರ್ಲಿಮೆಂಟ್ ನಲ್ಲೂ ಚರ್ಚೆಯಾಯಿತು. ತಮಗಿನ್ನು ಉಳಿಗಾಲವಿಲ್ಲವೆಂದು ಹೆದರಿದ ಪ್ಲಾಸ್ಟಿಕ್ ಉದ್ಯಮಿಗಳು ಪ್ಲಾಸ್ಟಿಕ್ ನಿಷೇಧಿಸುವ ಬದಲು ಈಗಿರುವ ಪ್ಲಾಸ್ಟಿಕ್‌ಗಿಂತ ಉತ್ತಮವಾದ ದಪ್ಪಗಿನ ಪ್ಲಾಸ್ಟಿಕ್‌ಗಳನ್ನು ಉಪಯೋಗಿಸಬಹುದಲ್ಲ? ಅವುಗಳು ಹೆಚ್ಚು ಭಾರ ಇರುವುದರಿಂದ ಗುಜರಿ ಹೆಕ್ಕುವವರು ಅದನ್ನು ಬಿಡದೆ ಹೆಕ್ಕುತ್ತಾರೆ. ಅವರ ಜೀವನೋಪಾಯುಕ್ಕೂ ಸಹಕಾರಿಯಾಗುತ್ತದೆ. ಎಂದೆಲ್ಲ ವಾದಿಸಿದರು.



ಕೊನೆಗೂ ಅದರಂತೆಯೇ ಕಾನೂನು ಜಾರಿಯಾಯಿತು. ಜಾರಿಗೆ ಆದೇಶ ಹೊರಟಿದ್ದು ಮಾತ್ರ. ಶಿರಸಾವಹಿಸಿ ಪಾಲಿಸಿದವರು ಒಬ್ಬರೂ ಇಲ್ಲ. ಮತ್ತದೇ ತೆಳು ಪ್ಲಾಸ್ಟಿಕ್ ಗಳು ಎಂದಿನಂತೆ ತಯಾರಾಗಿ ಮಾರುಕಟ್ಟೆಗೆ ಬರುತ್ತಲೇ ಇವೆ, ಗೋವುಗಳ ಹೊಟ್ಟೆ ಸೇರುತ್ತಲೇ ಇವೆ. ಕಾನೂನಿನ ಪ್ರಕಾರ ಇಪ್ಪತ್ತು ಮೈಕ್ರಾನ್ ಹಾಗೂ ಅದಕ್ಕಿಂತ ಕಡಿಮೆ ತೂಗುವ ಪ್ಲಾಸ್ಟಿಕ್ ನಿಷಿದ್ಧ. ಆದರೆ ಇಪ್ಪತ್ತು ಮೈಕ್ರಾನ್‌ಗೂ ಇಪ್ಪತ್ತೊಂದು ಮೈಕ್ರಾನ್‌ಗೂ ಇರುವ ವ್ಯತ್ಯಾಸವನ್ನು ಅಂಗಡಿಯವರು ಹೇಗೆ ತಾನೇ ಕಂಡುಕೊಂಡಾರು? [ಒಂದು ಮೈಕ್ರಾನ್ ಎಂದರೆ ಮನುಷ್ಯನ ಕೂದಲಿನ ವ್ಯಾಸದ ಏಳನೇ ಒಂದು ಭಾಗ]

ಎಂಟುವರ್ಷದ ಹಿಂದೆ ತಿಂಗಳಿಗೆ ಸುಮಾರು ೫೦೦೦ ಗೋವುಗಳು ಈ ಪ್ಲಾಸ್ಟಿಕ್ ಸೇವನೆಯಿಂದ ಸಾಯುತ್ತವೆಂದು ಅಂದಾಜಿಸಲಾಗಿತ್ತು. ಈಗ, ಎನ್.ಪಿ.ಆರ್.ನ ಗಣತಿಯಂತೆ, ತಿಂಗಳಿಗೆ ೧೫೦೦೦–೨೦೦೦೦ ಗೋವುಗಳು ಈ ಕಾರಣದಿಂದ ಅಸುನೀಗುತ್ತಿವೆಯಂತೆ!

ಎಲ್ಲಿಗೆ ಬಂತು ನೋಡಿ ನಮ್ಮ ಪರಿಸ್ಥಿತಿ! ಈಗಲಾದರೂ ಜನತೆ, ಸರಕಾರ ಈ ಬಗ್ಗೆ ಎಚ್ಚೆತ್ತುಕೊಂಡಾರೇ? ಇಲ್ಲದೇ ಹೋದರೆ, ಗೋವಿಲ್ಲದ ಪ್ರಪಂಚದಲ್ಲಿ? ಓಹ್! ಊಹಿಸಿಕೊಳ್ಳುವುದಕ್ಕೂ ಅಸಾಧ್ಯ ಆ ಜೀವನ.

**– ಅನುಶ್ರೀ ಎಲ್.**

# ಸುದ್ದಿ ಸಮಾಚಾರ

**ಭೂಮಾತೆ ಮತ್ತು ಗೋಮಾತೆ ನಮಗೆ ಅತಿ ಮುಖ್ಯ. ಗೋಮಾತೆಯ ಬಗ್ಗೆ ಅರಿವು ಮೂಡಿಸುವ ದಿಶೆಯಲ್ಲಿ ಗೋವಿಶ್ವ ಪ್ರಯತ್ನಿಸುತ್ತಿದೆ. ಜಗತ್ತಿನ ಮೂಲೆ ಮೂಲೆಯಿಂದ ಗೋ ಸಂಬಂಧಿ ಸುದ್ದಿ ಸಮಾಚಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗುತ್ತಿದೆ.**

## ಗವ್ಯ ಚಿಕಿತ್ಸೆ ವೈಜ್ಞಾನಿಕ – ಗುರುಸಿದ್ಧರಾಜಯೋಗೀಂದ್ರ ಶ್ರೀ

ಮೂರುಸಾವಿರಮಠ–ಹುಬ್ಬಳ್ಳಿ, ಡಿ. ೧೨: ಆರೋಗ್ಯ ರಕ್ಷಣೆಯಲ್ಲಿ ಗವ್ಯ ಚಿಕಿತ್ಸೆ ವೈಜ್ಞಾನಿಕ ಮಹತ್ತ್ವ ಪಡೆದಿದೆ. ಈ ನಿಟ್ಟಿನಲ್ಲಿ ಗೋ ಸಂಪತ್ತು ಪ್ರಯೋಜನಕಾರಿಯಾಗಿದೆ ಎಂದು ಮೂರುಸಾವಿರ ಮಠದ ಶ್ರೀ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ ಹೇಳಿದರು.

ಶ್ರೀರಾಮಚಂದ್ರಾಪುರಮಠದ ಆಶ್ರಯದಲ್ಲಿ ನಗರದಲ್ಲಿ ಆರಂಭವಾಗಿರುವ ಗವ್ಯ ಚಿಕಿತ್ಸಾ ಕೇಂದ್ರವನ್ನು ಉದ್ಘಾಟಿಸಿ, ಉಚಿತ ತಪಾಸಣಾ ಶಿಬಿರದ ಸಾನ್ನಿಧ್ಯ ವಹಿಸಿ ಮಾತನಾಡುತ್ತಿದ್ದರು. ಗೋ ಸಂಪತ್ತಿನ ಮಹತ್ತ್ವವನ್ನು ಎಳೆಎಳೆಯಾಗಿ ವಿವರಿಸಿದರು. ಗೋ ಉತ್ಪನ್ನಗಳ ಬಳಕೆ ಹಲವು ರೂಪಗಳಲ್ಲಿರುವುದರಿಂದ ರೈತರಿಗೆ ಅನುಕೂಲವಾಗುತ್ತದೆ. ಕೇವಲ ಬಾಯಿ ಚಪಲಕ್ಕಾಗಿ ಗೋಮಾಂಸ ತಿನ್ನುವುದು ಸರಿಯಲ್ಲವೆಂದರು.

ಉದ್ಯಮಿ ನಂದಕುಮಾರ್ ಗೋಮೂತ್ರದಿಂದ ಉತ್ತಮ ಗುಣಮಟ್ಟದ ಫಿನಾಯಿಲ್ ತಯಾರಿಸಬಹುದು. ಈಗಾಗಲೇ ಪ್ರಾಯೋಗಿಕವಾಗಿ ಸೆಪ್ಟೆಂಬರ್‌ನಲ್ಲಿ ಫಿನಾಯಿಲ್‌ನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ ಎಂದರು. ಸೆಗಣಿಯಿಂದ ಉತ್ಪಾದಿಸಬಹುದಾದ ಅನಿಲವನ್ನು ಸಿಲಿಂಡರ್‌ನಲ್ಲಿ ತುಂಬಿ ಮಾರುವ ಪ್ರಕ್ರಿಯೆ ಶೀಘ್ರದಲ್ಲಿಯೇ ಪ್ರಾರಂಭಗೊಳ್ಳಲಿದೆ ಎಂದರು.

ದೀಪಗೋಪುರದ ಕಾರ್ಯಾಧ್ಯಕ್ಷೆ ಭಾರತೀ ಪಾಟೀಲ್ ಧಾರವಾಡ ಜಿಲ್ಲೆಯನ್ನು ಗೋ ಅಭಯ ಜಿಲ್ಲೆಯನ್ನಾಗಿ ಪರಿವರ್ತಿಸುವ ಸಂಕಲ್ಪ ತಮ್ಮದು ಎಂದು ಹೇಳಿದರು.

ಡಾ. ರವಿ ಆರೋಗ್ಯ ಮತ್ತು ಗವ್ಯ ಚಿಕಿತ್ಸೆಯ ಬಗೆಗೆ ಒಂದಿಷ್ಟು ಬೆಳಕು ಚೆಲ್ಲಿದರು. ಈ ದಿನಗಳಲ್ಲಿ ಸುಸ್ಥಿರ ಹಾಗೂ ಅಡ್ಡ ಪರಿಣಾಮ ರಹಿತ ಆರೋಗ್ಯ ನೀಡುವಲ್ಲಿ ಗವ್ಯ ಉತ್ಪನ್ನಗಳಿಂದ ಮಾತ್ರ ಸಾಧ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹು.ಧಾ. ಮಾಜಿ ಅಧ್ಯಕ್ಷ ಲಿಂಗರಾಜ ಪಾಟೀಲ್, ಹಿರಿಯ ಪತ್ರಕರ್ತ ಅರುಣಕುಮಾರ ಹಬ್ಬು, ಗೋ ಪರಿವಾರದ ರಾಜ್ಯ ಸಂಚಾಲಕ ಮಹೇಶ ಚಟ್ನಳ್ಳಿ, ಡಾ. ರಾಘವೇಂದ್ರ, ಡಿ.ಎಸ್. ಭಟ್ ಮೊದಲಾದವರು ಉಪಸ್ಥಿತರಿದ್ದರು.



ಮೂರುಸಾವಿರ ಮಠ, ಹುಬ್ಬಳ್ಳಿ. ಗವ್ಯ ಚಿಕಿತ್ಸೆಯ ಉಚಿತ ತಪಾಸಣಾ ಶಿಬಿರದ ಆರಂಭ ಮಂಗಳ ಸಮಾರಂಭ. ಗೋ ಪರಿವಾರದ ರಾಜ್ಯ ಸಂಚಾಲಕ ಕಾರ್ಯಕ್ರಮವನ್ನು ನಿರೂಪಿಸುತ್ತಿದ್ದಾರೆ. ಚಿತ್ರದಲ್ಲಿ (ಎಡದಿಂದ) ಹು–ಧಾ ಮಾಜಿ ಅಧ್ಯಕ್ಷ ಲಿಂಗರಾಜ ಪಾಟೀಲ್, ಡಾ. ರವಿ, ಉದ್ಯಮಿ ನಂದಕುಮಾರ್, ದೀಪಗೋಪುರದ ಕಾರ್ಯಾಧ್ಯಕ್ಷೆ ಭಾರತೀ ಪಾಟೀಲ್, ಶ್ರೀ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ, ಡಾ. ರಾಘವೇಂದ್ರ, ಹಿರಿಯ ಪತ್ರಕರ್ತ ಅರುಣಕುಮಾರ ಹಬ್ಬು ಇದ್ದಾರೆ.

# ಪಂಚಗವ್ಯ – ರೈತರಿಗೆ ವರದಾನ

ಹಲವಾರು ಬೆಳೆಗಳು ಪಂಚಗವ್ಯದಿಂದಾಗಿ ಹೆಚ್ಚಿನ ಫಸಲು ಹಾಗೂ ಕಡಿಮೆ ಕಾಲಾವಧಿಯಲ್ಲಿ ಫಲನೀಡುತ್ತದೆ ಎಂಬುದಾಗಿ ಕೆಲವು ಪ್ರಯೋಗಗಳ ಆರಂಭಿಕ ನಿಷ್ಕರ್ಷೆಗಳಿಂದ ತಿಳಿದು ಬಂದಿದೆ.

ಹಾಗಯೇ, ದೇಶೀ ಗೋವುಗಳ ಪಂಚಗವ್ಯವು ವಿದೇಶಿ ತಳಿಗಳ ಪಂಚಗವ್ಯಕ್ಕಿಂತ ಹೆಚ್ಚು ಸಾಮರ್ಥ್ಯಶಾಲಿಯಾಗಿರುವುದಾಗಿ ಗೊತ್ತಾಗಿದೆ.

ಪಂಚಗವ್ಯ ಎಂದರೆ ಹಸುವಿನ ಐದು ಉತ್ಪನ್ನಗಳಾದ ಸಗಣಿ, ಮೂತ್ರ, ಹಾಲು, ಮೊಸರು ಮತ್ತು ತುಪ್ಪ. ಇದನ್ನು ತೀರ್ಥ ಎಂದೂ ಆಸ್ತಿಕರು ಸ್ವೀಕರಿಸುತ್ತಾರೆ. ಇದು ದೇಹಶುದ್ಧೀಕರಣ ಮಾಡುತ್ತದೆ.

ತಮಿಳುನಾಡು ಕೃಷಿ ವಿಶ್ವವಿದ್ಯಾಲಯದ ಓರ್ವ ಹಿರಿಯ ವಿಜ್ಞಾನಿ ಕೃಷಿಯಲ್ಲಿ ಪಂಚಗವ್ಯದ ಪಾತ್ರವನ್ನು ವೈಜ್ಞಾನಿಕವಾಗಿ ಪರೀಕ್ಷಿಸಿದ್ದಾರೆ. ಅವರ ವರದಿಯಂತೆ ನಡೆಸಿರುವ ಪ್ರಯೋಗದ ಆರಂಭಿಕ ನಿಷ್ಕರ್ಷೆಗಳಿಂದ ಹಲವಾರು ಬೆಳೆಗಳು ಹೆಚ್ಚಿನ ಫಸಲು ಹಾಗೂ ಕಡಿಮೆ ಕಾಲಾವಧಿಯಲ್ಲಿ ಫಲನೀಡುತ್ತವೆ ಎಂಬುದಾಗಿ ತಿಳಿದು ಬಂದಿದೆ.

ಈ ಕಲ್ಪನೆಯನ್ನು ಯಶಸ್ವಿಯಾಗಿ ಜನಪ್ರಿಯಗೊಳಿಸುವುದರಲ್ಲಿ ಈರೋಡ್ ಜಿಲ್ಲೆಯ ಕೊಡುಮುಡಿಯಲ್ಲಿನ ಓರ್ವ ವೃತ್ತಿನಿರತ ವೈದ್ಯರಾಗಿರುವ ಡಾ.ಕೆ. ನಟರಾಜನ್ ಅವರದೇ ಪ್ರಧಾನ ಪಾತ್ರವೆಂದು ರಾಜ್ಯದ ಹಾರ್ತಿಕಲ್ಚರಲ್ ಕಾಲೇಜ್ ಹಾಗೂ ವಿಶ್ವವಿದ್ಯಾಲಯದ ಸಂಶೋಧನಾ ವಿಭಾಗದ ಪ್ರಮುಖರಾಗಿರುವ ಡಾ.ಈ. ವಡಿವೇಲ್ ಅವರು ಹೇಳಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಸಾವಯವ ಕೃಷಿ ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಸಂಶೋಧನಾ ವಿಭಾಗವು ಈ ಸಂಬಂಧದಲ್ಲಿ ಸೂಕ್ಷ್ಮಾಣು ಜೀವಿಗಳ ಕೆಲಸದ ಪ್ರಭಾವದ ಕುರಿತು ಮನ್ನಣೆ ನೀಡಲು ಮತ್ತು ಕೆಲವು ಆಯ್ದ ಬೆಳೆಗಳ ಮೇಲೆ ಪ್ರಯೋಗ ಮಾಡಲು ಸಹ ಮುಂದಾಯಿತು. ಈಗ ಅದರಲ್ಲಿ ಫಸಲಿನ ಪ್ರಮಾಣ ಹೆಚ್ಚಾಗುವ ಹಾಗೂ ಬೆಳೆಯ ಕಾಲಾವಧಿ ಕಡಿಮೆಯಾಗುವ ಇವೆರಡೂ ನಿಟ್ಟಿನಲ್ಲಿ ಸಕಾರಾತ್ಮಕ ಫಲಗಳು ಲಭಿಸಿವೆ ಎಂದು ಅವರು ತಿಳಿಸಿದ್ದಾರೆ. ಸೂರ್ಯಕಾಂತಿ, ಅಶ್ವಗಂಧ (ಔಷಧೀಯ ಗಿಡ), ಜೋಳ, ಭತ್ತ , ನುಗ್ಗೆಕಾಯಿ ಮತ್ತು ಮೂಲಂಗಿ ಇವುಗಳ ಮೇಲೆ ನಡೆಸಲಾದ ಈ ಪ್ರಯೋಗದಲ್ಲಿ ಮೊದಲ ಪ್ರಯತ್ನದಲ್ಲೇ ಶೇ.೨೦–೨೫ರಷ್ಟು ಫಸಲು ಹೆಚ್ಚಾಗಿರುವುದು ಗಮನಕ್ಕೆ ಬಂದಿದೆ. ಅದೇ ರೀತಿಯಲ್ಲಿ ಭತ್ತ ಮತ್ತು ಕಬ್ಬಿನ ಬೆಳೆಯಲ್ಲಿ ಫಸಲಿನ ಕಾಲಾವಧಿ ಕನಿಷ್ಠ ೨೦ ದಿನಗಳಷ್ಟು ಕಡಿಮೆಯಾಗಿರುವುದು ಸಹ ಗೊತ್ತಾಗಿದೆ ಎಂದು ಡಾ. ವಡಿವೇಲ್ ಅವರು ಹೇಳುತ್ತಾರೆ. ಅಷ್ಟೇ ಅಲ್ಲ, ಕಬ್ಬಿನಲ್ಲಿ ಮರು ಪ್ರಾಪ್ತಿಯು ಶೇ.೧ರಷ್ಟು ಏರಿಕೆಯಾಗಿರುವುದು ಕೂಡ ಗೊತ್ತಾಗಿದೆ.

ಪಂಚಗವ್ಯದ ಎಲ್ಲ ಮೂಲವಸ್ತುಗಳು ಆಯಾ ಕೃಷಿ ಕ್ಷೇತ್ರದಲ್ಲೇ ಲಭ್ಯವಿರುವುದರಿಂದ ಅದನ್ನು ಸಾಮಾನ್ಯವಾಗಿ ಯಾವುದೇ ಕೃಷಿಗೆ ಅಲ್ಲಲ್ಲೇ ತಯಾರಿಸಿ ಬಳಸಬಹುದಾದರೂ ತೋಟದ ಬೆಳೆಗಳಿಗೆ ಮತ್ತು ವ್ಯಾಪಾರಿ ಬೆಳೆಗಳಿಗೆ ಅದನ್ನು ಬಳಸುವುದು ಹೆಚ್ಚು ಉಪಯುಕ್ತ ಎಂಬುದು ಡಾ. ವಡಿವೇಲ್ ಅವರ ಅಭಿಪ್ರಾಯವಾಗಿದೆ. ಇದರಲ್ಲೂ ದೇಶೀ ಗೋವುಗಳ ಪಂಚಗವ್ಯವು ವಿದೇಶ ತಳಿಗಳ ಗೋವುಗಳದಕ್ಕಿಂತ ಹೆಚ್ಚು ಸಾಮರ್ಥ್ಯಶಾಲಿಯಾಗಿರುವುದಾಗಿ ಗೊತ್ತಾಗಿದೆ.

ಈಗಾಗಲೇ ಗೋಮೂತ್ರದ ಮೇಲೆ ಸಂಶೋಧನೆ ನಡೆಸಿ, ಅದರಲ್ಲಿ ಪೇಟೆಂಟ್ ಹಕ್ಕನ್ನು ಪಡೆದಿರುವ ಸಿ.ಎಸ್.ಐ.ಆರ್. ಸಹಯೋಗದೊಂದಿಗೆ ಪಂಚಗವ್ಯದ ವಿಷಯದಲ್ಲಿ ತಾನು ಪೇಟೆಂಟ್ ಪಡೆಯಲು ವಿಶ್ವವಿದ್ಯಾಲಯವು ಮುಂದಾಗಿದೆ. ಪಂಚಗವ್ಯವನ್ನು ತಯಾರಿಸುವ ವಿಷಯದಲ್ಲಿ ಮಾತಾಡುತ್ತ ಡಾ. ವಡಿವೇಲ್ ಅವರು, ಗೋಬರ್ ಗ್ಯಾಸ್ ಘಟಕದಿಂದ ಲಭಿಸುವ ಸಗಣಿ ಸ್ಲರಿ, ಜೊತೆಯಲ್ಲಿ ತಾಜಾ ಸಗಣಿ, ಗೋಮೂತ್ರ, ಹಾಲು, ಮೊಸರು, ತುಪ್ಪ, ಕಬ್ಬಿನ ಹಾಲು, ಎಳನೀರು, ಬಾಳೆಹಣ್ಣು ಇವುಗಳನ್ನು ಅಗಲಬಾಯಿಯ ಮಣ್ಣಿನ ಪಾತ್ರೆಯಲ್ಲಾಗಲೀ, ಕಾಂಕ್ರೀಟ್ ತೊಟ್ಟಿಯಲ್ಲಾಗಲೀ ಅಥವಾ ಪ್ಲಾಸ್ಟಿಕ್ ಪಾತ್ರೆಯಲ್ಲಾಗಲೀ ನಿರ್ಧಾರಿತ ಪ್ರಮಾಣದಲ್ಲಿ ಕಲಸಬೇಕು. ಈ ಪಾತ್ರೆ ಅಥವಾ ತೊಟ್ಟಿಯನ್ನು ನೆರಳಲ್ಲಿ ತೆರೆದು ಇರಿಸಿ, ದಿನದಲ್ಲೆರಡು ಬಾರಿ–ಪ್ರಾತಃಕಾಲ ಮತ್ತುಸಂಜೆ ಚೆನ್ನಾಗಿ ಕಲಕಬೇಕು. ಈ ದ್ರಾವಣವು ಏಳು ದಿನಗಳಲ್ಲಿ ಪೂರ್ಣವಾಗಿ ಸಿದ್ಧವಾಗಿದ್ದು ನಂತರ ಅದನ್ನು ಚಿಮುಕಿಸಲು, ಹರಿಯಿಸಲು ಹಾಗೂ ಬೀಜ ಮತ್ತು ಸಸಿಗಳ ಸಂಸ್ಕರಣೆಗೂ ಬಳಸಬಹುದು ಎಂದು ಅವರು ಹೇಳಿದ್ದಾರೆ.

ಪಂಚಗವ್ಯವು ವಿಕಾರಗಳನ್ನು ದೂರ ಮಾಡುವ ಕಫ, ವಾತ ಮತ್ತು ಪಿತ್ತಜನ್ಯ ರೋಗ, ಹೃದಯ ರೋಗ, ವಿಷಪ್ರಭಾವದಿಂದ ಹೃದಯವನ್ನು ರಕ್ಷಿಸುತ್ತದೆ.

(ಕೃಪೆ: ಧರ್ಮಭಾರತೀ)

## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ ೨೭, ೨೦೦೭ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ–ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು ಹದಿನೈದನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ–ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com